ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ಯಾವ ತರಹದ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಅಧಿಕಾರಿಗಳು ತಮ್ಮ ಮಾತನ್ನು ಕೇಳುತ್ತಿಲ್ಲ. ಈ ಹಂತದಲ್ಲಿ ಸರ್ಕಾರ ವಿಫಲವಾಗಿದೆ. ಅದಕ್ಕೆ ಕಾಂಗ್ರೆಸ್ ಪಕ್ಷದವರೆಲ್ಲರೂ ತೀರ್ಮಾನವನ್ನೂ ತೆಗೆದುಕೊಂಡಿದ್ದೇವೆ. ಇಂತಹ ಒಂದು ಹೇಳಿಕೆಯಿಂದ ನಮಗೆ ಯಾವುದೂ ತೃಪ್ತಿಯಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ನಾನು ಇನ್ನೂ ಹೇಳಿಕೆಯನ್ನೇ ಕೊಟ್ಟಿಲ್ಲ. ಸಮಗ್ರವಾದ ಹೇಳಿಕೆಯನ್ನು ನಾಳೆ ಮಾಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ : ಇದು ಜವಾಬ್ದಾರಿಯುತವಲ್ಲ. ಹೇಳಿಕೆಯನ್ನು ಕೊಡಬೇಕಾಗಿತ್ತು. ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಏನ್ ಸಾರ್ ಈ ರೀತಿ ಮಾತನಾಡಿದರೆ?

ಅಧ್ಯಕ್ಷರು : ಈಗ ಸದನವನ್ನು 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕೆ 1 ಗಂಟೆ 49 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು 3 ಗಂಟೆ 27 ನಿಮಿಷಕ್ಕೆ ಸೇರಿತು. ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್. ವೈ. ಗೋಪಾಲಕೃಷ್ಣಮಯ) ಅಧ್ಯಕ್ಷ ಪೀಠದಲ್ಲಿದ್ದರು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ : ದಿನಗೂಲಿ ನೌಕರರ ಸಮಸ್ಯೆ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೇ, ದಿನಗೂಲಿ ನೌಕರರ ಬಗ್ಗೆ ನಾನು ಮಾನ್ಯ ಅಧ್ಯಕ್ಷರಿಗೆ ಒಂದು ಮನವಿ ಸಲ್ಲಿಸಿದ್ದೆ. ಇಲ್ಲಿ ಮಾನ್ಯ ಹಣಕಾಸು ಸಚಿವರೂ ಉಪ ಮುಖ್ಯಮಂತ್ರಿಗಳೂ ಇದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. 16-4-2006 ರಿಂದ ಹುಬ್ಬಳ್ಳಿಯಲ್ಲಿ ಒಂದು ದೊಡ್ಡ ರ್ಯಾಲಿ ಮಾಡಿದರು. ಮತ್ತೆ ಮೇ 1ನೇ ತಾರೀಖು ಹುಬ್ಬಳ್ಳಿಯಲ್ಲಿ ನಾನಾ ಭಾಗಗಳಿಂದ ಸುಮಾರು 5 ಸಾವಿರ ಜನ ಮಾನ್ಯ ಪೊರ್ಟ್ಫಿಯವರ ಮನೆ ಮುಂದೆ ಧರಣಿ ಮಾಡಿದರು. ದಿನಗೂಲಿ ನೌಕರರನ್ನು ಖಾಯಂ ಮಾಡಬೇಕು ಎಂದು. 17 ಸಾವಿರ ದಿನಗೂಲಿ ನೌಕರರಿದ್ದಾರೆ. 17 ಸಾವಿರ ಜನರೂ ಬೀದಿಗೆ ಬಂದಿದ್ದಾರೆ, ಹತ್ತಾರು ವರ್ಷಗಳಿಂದ ಇಡೀ ರಾಜ್ಯದ ಅನೇಕ ಇಲಾಖೆಗಳಲ್ಲಿ ಇದ್ದಾರೆ. ಅವರ ಸಂಬಳವೂ ಬಹಳ ಕನಿಷ್ಠ. ಯಾವ ಸವಲತ್ತುಗಳೂ ಇಲ್ಲ. 800-900 ರೂ. ಈ ತರಹ. ಇವರಿಗೆ ರಜೆದಿನಗಳಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರು ಇರುವಾಗ 10-1-2006 ರಲ್ಲಿ ಸುಪ್ರೀಂಕೋರ್ಟ್ ಇವರನ್ನು ಖಾಯಂ ಮಾಡಬಾರದು ಅಂತ ಒಂದು ತೀರ್ಮ ಕೊಡುತ್ತದೆ. ಅದರ ಆಧಾರದ ಮೇಲೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಇವರನ್ನು ಕೆಲಸದಿಂದ ತೆಗೆದುಬಿಡಿ ಎಂದು ಹೇಳುತ್ತಾರೆ. ನನಗನ್ನಿಸುತ್ತದೆ, ಮಾನವೀಯತೆ ದೃಷ್ಟಿಯಿಂದ 17 ಸಾವಿರ

3.30. P.M.

ದಿನಗೂಲಿ ನೌಕರರನ್ನು ಖಾಯಂ ಮಾಡಲು ಸರ್ಕಾರದ ಒಂದು ಪ್ರಾಮಾಣಿಕವಾದಂತಹ ಕ್ರಮ ಕೈಗೊಳ್ಳಬೇಕು. ಈಗ ಅವರು ಬೆಂಗಳೂರಿಗೆ ಬಂದಿದ್ದಾರೆ. ಮಾಡು ಅಥವಾ ಮಡಿ ತರಹದ ಘೋಷಣೆ ಕೂಗಿಕೊಂಡು ಬಂದಿದ್ದಾರೆ. x ಆದುದರಿಂದ, ರಾಜ್ಯ ಸರ್ಕಾರ ಅವರಿಗೆ ಆ ಉದ್ಯೋಗವನ್ನು ಕಳೆದುಕೊಳ್ಳದ ರೀತಿಯಲ್ಲಿ ಯಾವ ಕ್ರಮ ಸರ್ಕರ ಕೈಗೊಳ್ಳುತ್ತದೆಂದು ಮಾನ್ಯ ಹಣಕಾಸು ಸಚಿವರು ಮತ್ತು ಉಪ ಮುಖ್ಯಮಂತ್ರಿಗಳಾದ ಶ್ರೀಮಾನ್ ಯಡಿಯೂರಪ್ಪರವರಲ್ಲಿ ನಾವು ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ. ಅವರು ಯಾವುದೇ ಕಾರಣಕ್ಕೂ ಬೀದಿಗೆ ಹೋಗಬಾರದು. ಯಾವುದೇ ಕಾರಣಕ್ಕೂ ಅವರನ್ನು ಕೆಲಸದಿಂದ ತೆಗೆದುಹಾಕಬಾರದು. ಆ ದೃಷ್ಟಿಯಿಂದ ಸರ್ಕಾರ ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಬೇಕು. ಇವರು ಪ್ರತಿ ಕ್ಷೇತ್ರಗಳಲ್ಲೂ ಇದ್ದಾರೆ. 17 ಸಾವಿರ ಜನರಲ್ಲಿ ಅನೇಕರು ಮದುವೆಯಾಗಿದ್ದಾರೆ, ಅನೇಕರಿಗೆ ವಯಸ್ಸಾಗಿದೆ. ಅನೇಕರು ತೊಂದರೆಯಲ್ಲಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ನೋಡಿದಾಗ ಯಾವುದೇ ಕಾರಣಕ್ಕೂ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೇ ಗಮನದಲ್ಲಿಟ್ಟುಕೊಂಡು, ಅವರುಗಳನ್ನು ಹೊರಗೆ ಹಾಕುವುದಕ್ಕಿಂತಲೂ ಹೆಚ್ಚಾಗಿ 17 ಸಾವಿರ ದಿನಗೂಲಿ ನೌಕರರನ್ನು ಉಳಿಸಿಕೊಳ್ಳತಕ್ಕಂಥ ವಿಧಾನ ಯಾವುದು? ಯಾವ ರೀತಿ ಉಳಿಸಿಕೊಳ್ಳಬಹುದು ಎಂಬುದನ್ನು ಯೋಚಿಸಬೇಕು. ಒಂದು ಕಡೆ ತೀರ್ಮ ಇದೆ. ಮತ್ತೊಂದು ಕಡೆ ಇವರನ್ನು ಯಾವ ರೀತಿ ಉಳಿಸಿಕೊಳ್ಳಬಹುದೆಂಬ ದೃಷ್ಟಿಯಲ್ಲಿ ನಿಮ್ಮ ಸರ್ಕಾರ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯುತ್ತಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಬಗ್ಗೆ ಬೆಳಿಗ್ಗೆ ಮಾನ್ಯ ಅಧ್ಯಕ್ಷರಲ್ಲಿ ಪ್ರಸ್ತಾಪಿಸುತ್ತಾ, ಶೂನ್ಯ ವೇಳೆಯಲ್ಲಿ ಅವಕಾಶ ಕೊಡಬೇಕೆಂದು ತಿಳಿಸಿದ್ದೆ. ಈಗ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಿರಿಯ ಶಾಸಕರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪಿಸಿದಂತೆ, ಸುಮಾರು 10 ರಿಂದ 12 ಸಾವಿರದಷ್ಟು ದಿನಗೂಲಿ ನೌಕರರು ರಾಜ್ಯದ ಮೂಲೆ-ಮೂಲೆಗಳಿಂದ ಬೆಂಗಳೂರಿಗೆ ಬಂದಿದ್ದಾರೆ. ಬಹಳ ದೊಡ್ಡ ಸತ್ಯಾಗ್ರಹ ಇವೊತ್ತು ಬೆಂಗಳೂರಿನಲ್ಲಿ ನಡೆಯುತ್ತಿದೆ ಮತ್ತು ಆ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದಾರೆ. ನಾವು, ಮಾನ್ಯ ಉಪ ಮುಖ್ಯಮಂತ್ರಿಗಳು ಜಗದೀಶ್ ಶೆಟ್ಟರ್ ಹಾಗೂ ಎಲ್ಲರೂ ಎದುರುಗಡೆ ಇದ್ದಾಗ ಹಿಂದಿನ ಸಲ ಇದರ ಬಗ್ಗೆ ಪ್ರಸ್ತಾಪಿಸಿದ್ದೆವು. ಹಿಂದಿನ ಸರ್ಕಾರ ಇವರನ್ನು ಬಹಳ ಅಸಡ್ಡೆಯಿಂದ ನಡೆಸಿಕೊಂಡಿತು. ಏಕೆಂದರೆ, ಇವರನ್ನು ಕೋರ್ಟಿಗೆ ಹೋಗಲು ಬಿಡಬಾರದಾಗಿತ್ತು. ಇವರುಗಳು ಕಳೆದ 15-20 ವರ್ಷಗಳಿಂದ ಈ ರಾಜ್ಯದ ವಿವಿಧ ಕಚೇರಿಗಳಲ್ಲಿ

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಕೆಲಸ ಮಾಡುತ್ತಿದ್ದಾರೆ. ಯಾರು ಇವರು? ಡ್ರೈವರ್, ಗ್ರೂಪ್-ಡಿ, ಕಸ ಹೊಡೆಯುವವರು, ಕಾರಕೂನರು, ಈ ಎಲ್ಲಾ ಕೆಲಸಗಳನ್ನು ಇವರು ಮಾಡುತ್ತಿದ್ದಾರೆ. ಯಾವುದೇ ಹುದ್ದೆಗೆ ರಿಕ್ರೂಟ್‌ಮೆಂಟ್ ಇಲ್ಲದೆ, ಅವರು ಸರ್ಕಾರದಲ್ಲಿದ್ದು ಸುಮಾರು 20-25 ವರ್ಷಗಳಾಗಿವೆ. ಯಾವುದೇ ಸರ್ಕಾರದಲ್ಲೂ ಮಾಡಲಿಲ್ಲ. ಆಯಾ ಸಮಯಕ್ಕೆ ಅನುಗುಣವಾಗಿ ಅಲ್ಲಿರುವ ಅಧಿಕಾರಿಗಳು ಈ ಕೆಲಸಗಳನ್ನು ನಿಭಾಯಿಸುವುದಕ್ಕೋಸ್ಕರ ಆಗಿಂದಾಗ್ಗೆ ಇವರುಗಳನ್ನು ತೆಗೆದುಕೊಂಡರು. ಆ ರೀತಿ ಕೆಲಸಗಾರರನ್ನು ತೆಗೆದುಕೊಂಡ ಅಧಿಕಾರಿಗಳೆಲ್ಲರೂ ಇವ್ಹೊತ್ತು ರಿಟೈರ್ ಆಗಿದ್ದಾರೆ. ಯಾವತ್ತೋ ಒಂದು ದಿವಸ ನಮ್ಮ ಜೀವನ ಸುಗಮವಾಗಬಹುದೆಂದು ಜೀತದಾಳುಗಳಂತೆ ದುಡಿದಿದ್ದಾರೆ. ಖಾಯಂ ಆಗಿರುವವರು ಇವ್ಹೊತ್ತು ಕಚೇರಿಗೆ ಬಾರದಿದ್ದರೂ, ಈ ಜನರು ಬಂದು, ಕಚೇರಿ ಬೀಗ ತೆಗೆದು ಕಸ ಹೊಡೆದು ನೀರು ಹಾಕಿ ಕಚೇರಿಯಲ್ಲಿ ಕುಳಿತುಕೊಂಡು ಕೆಲಸ ಮಾಡಿ ಸುಮಾರು 15-20 ವರ್ಷಗಳ ಕಾಲ ಸರ್ಕಾರದ ರಥ ಎಳೆದಿದ್ದಾರೆ. ಅವರನ್ನು ಖಾಯಂಗೊಳಿಸಲಿಲ್ಲ. ಅಧ್ಯಕ್ಷರೆ, ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅವ್ಹೊತ್ತಿನಿಂದ ಇವ್ಹೊತ್ತಿನವರೆಗೂ ನಿವು ಖಾಯಂ ನೌಕರರಿಗೆ ಸಂಬಳ ಕೊಟ್ಟಿದ್ದರೆ, ರಾಜ್ಯದ ಖಜಾನೆಗೆ ಎಷ್ಟು ವೆಚ್ಚ ಬರುತ್ತಿತ್ತು ಎಂಬುದನ್ನು ಯೋಚಿಸಿ. ಕೇವಲ 800, 1000, 1,200 ರೂಪಾಯಿಗಳಿಗೆ ಅವರುಗಳನ್ನು ದುಡಿಸಿಕೊಂಡಿದ್ದೇವೆ. ಅವರು ಹೇಳಿದಂತೆ ಯಾವತ್ತಾದರೂ ಒಂದು ದಿವಸ ಆಗಬಹುದೆಂದು ನೀವು ಅವರಿಗೆ ರಜೆ ಕೊಡಲಿಲ್ಲ, ಯಾವುದೇ ಭತ್ಯೆಗಳನ್ನು ಕೊಡಲಿಲ್ಲ. ಪರಿಣಾಮವೇನಾಯಿತು? ಅವರು ಸುಪ್ರೀಂಕೋರ್ಟಿಗೆ ಹೋದರು. ಸುಪ್ರೀಂಕೋರ್ಟ್‌ನಲ್ಲಿ ತದ್ವಿರುದ್ಧವಾಗಿ ಜಡ್ಜ್‌ಮೆಂಟ್ ಆಯಿತು. ಇದರ ಆಧಾರದ ಮೇಲೆ ದಿನಾಂಕ 25.5.2006 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಒಂದು ಸುತ್ತೋಲೆ ಕಳುಹಿಸಿದ್ದಾರೆ. 1984 ಕ್ಕಿಂತಲೂ ಹಿಂದಿನವರನ್ನು ಖಾಯಂಗೊಳಿಸಿ, ಅದರ ನಂತರ ನೇಮಕಗೊಂಡವರನ್ನೆಲ್ಲಾ ಒಂದು ತಿಂಗಳು ನೋಟೀಸ್ ಕೊಟ್ಟು ತೆಗೆದುಹಾಕಿ ಎಂದಿದ್ದಾರೆ. ಇದು ಆಗುವುದಿಲ್ಲ. ಇವ್ಹೊತ್ತು ಅನೇಕ ಹುದ್ದೆಗಳಿವೆ. ಇವ್ಹೊತ್ತು ಅವರು ಹೊರಗೆ ಹೋದರೆ, ನಾಳೆಯಿಂದ ಇಂಜಿನಿಯರ್‌ಗಳ ಜೀಪ್ ಹೊರಡುವುದಿಲ್ಲ ಅಥವಾ ಡಿ.ಸಿ.ಯವರ ಕಾರು ಹೊರಡುವುದಿಲ್ಲ. ಸರ್ಕಾರದ ಇಡೀ ಮೆಷಿನರಿ ಸ್ತಬ್ಧವಾಗುತ್ತದೆ. ಇಂತಹ ಪರಿಸ್ಥಿತಿ ಇದೆ. ಅಲ್ಲಿ ಕಾರಕೂನರು ಇಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ 10-15 ವರ್ಷಗಳಿಂದ ಅವರ ಯೌವ್ವನ ದ ದಿನಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡಿ ದುಡಿದಿರುವ ಜನರನ್ನು ಏಕಾಏಕಿ ಹೊರಗೆ ಹಾಕಿ ಎಂದರೆ, ಇದು ಮಾನವೀಯತೆ ಪ್ರಶ್ನೆ. ನಮ್ಮ ಸರ್ಕಾರ ಇದನ್ನು ಮನಗಂಡು ಯಾವುದೇ ಕಾರಣಕ್ಕೂ ಇನ್ನು ಮುಂದೆ ಈ ರೀತಿ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದಲ್ಲ. ಸುಪ್ರೀಂಕೋರ್ಟ್ ಬಹಳ ಒಳ್ಳೆಯ ತೀರ್ಪು ಕೊಟ್ಟಿದೆ. ಈಗ ಇದಕ್ಕಿದ್ದಂತೆ ಯಾರನ್ನೋ ಮಧ್ಯೆ ಸೇರಿಸಿಕೊಂಡರೆ ಆಗುವುದಿಲ್ಲ. ಅವರು ಕಾಂಪಿಟಿಶನ್‌ನಲ್ಲಿ ಬರಬೇಕಾಗುತ್ತದೆ. ಆದುದರಿಂದ, ಇನ್ನು ಮುಂದೆ ಬಹಳ ಕಠಿಣವಾಗಿರುವ ನಿಲುವನ್ನು ತೆಗೆದುಕೊಳ್ಳಬೇಕು. ಯಾವುದೇ ಅಧಿಕಾರಿಗಳು ದಿನಗೂಲಿ ಆಧಾರದ ಮೇಲೆ ನೌಕರರುಗಳನ್ನು ಸೇರಿಸಿಕೊಂಡು ರಂಪ ಮಾಡುವುದಲ್ಲ ಎನ್ನುವುದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಈಗಿರತಕ್ಕ ದಿನಗೂಲಿ ನೌಕರರುಗಳನ್ನು ಇವ್ಹೊತ್ತು

ಖಾಯಂಗೊಳಿಸುವ ದಿಕ್ಕಿನತ್ತ ಘನ ಸರ್ಕಾರ ಆಲೋಚಿಸಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು, ಸಚಿವರು ಅವರ ಬಳಿಗೆ ಹೋಗಿ ಅವರಿಗೆ ಸಮಾಧಾನ ಹೇಳಬೇಕು. ತನ್ಮೂಲಕ ಅವರಿಗೆ ಧೈರ್ಯ ತುಂಬುವಂತಹ ಕೆಲಸ ಮಾಡಬೇಕೆಂದು ನಾನು ಈ ಸದನದಲ್ಲಿ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ಈ ದಿನಗೂಲಿ ನೌಕರರ ಸಮಸ್ಯೆ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್ ಮತ್ತು ಆರಗ ಜ್ಞಾನೇಂದ್ರರವರು ಏನು ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ಎರಡು ಅಂಶಗಳನ್ನು ನಾನು ಮಾನ್ಯ ಮುಖ್ಯಮಂತ್ರಿಗಳು, ಹಣಕಾಸು ಮಂತ್ರಿಗಳು ಮತ್ತು ಸರ್ಕಾರದ ನೇತಾರರ ಗಮನಕ್ಕೆ ತರಬಯಸುತ್ತೇನೆ. ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸುಪ್ರೀಂಕೋರ್ಟ್‌ನಿಂದ ಒಂದು ಆರ್ಡರ್ ಆಗಿದೆ. ಸುಪ್ರೀಂಕೋರ್ಟ್ ಆರ್ಡರ್ ನಂತರ ಸರ್ಕಾರಕ್ಕೆ ಕೆಲವು ಇತಿ-ಮಿತಿಗಳಿವೆ. ಇದನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗುತ್ತದೆ ಮತ್ತು ಕರ್ನಾಟಕ ರಾಜ್ಯ ಆಡಳಿತದಲ್ಲಿ, ಇಲ್ಲಿ ಯಾರೇ ಮುಖ್ಯಮಂತ್ರಿಗಳಿರಲಿ, ಯಾವುದೇ ಪಕ್ಷಗಳಿರಲಿ, ಸಮ್ಮಿಶ್ರ ಸರ್ಕಾರವೇ ಇರಲಿ, ಒಂದು ಒಳ್ಳೆಯ ಆಡಳಿತ ಕೊಟ್ಟಿದ್ದೇವೆ. ನಾವು ಒಳ್ಳೆಯ ಹೆಸರು ಗಳಿಸಿದ್ದೇವೆ. ನಮ್ಮ ಬ್ಯೂರೊಕ್ರಸಿ ಏನಿದೆ. ಅದಕ್ಕೆ ಒಳ್ಳೆಯ ಹೆಸರು ಇದೆ. ರಾಷ್ಟ್ರದ ನಾಲ್ಕೈದು ರಾಜ್ಯಗಳಲ್ಲಿ ಒಳ್ಳೆಯ ಆಡಳಿತ ಕೊಟ್ಟಿರತಕ್ಕಂಥ ಸರ್ಕಾರಿ ನೌಕರರು ಅಥವಾ ಸರ್ಕಾರದ ಅಧಿಕಾರಿಗಳೆಂದರೆ, ಅದರಲ್ಲೂ ಕರ್ನಾಟಕ ಸರ್ಕಾರ ಒಂದಾಗಿದೆ. ಅನೇಕ ಕಾರಣಗಳಿಂದ ನಮ್ಮ ವಿಭಾಗೀಯ ಮಟ್ಟದ ಅಧಿಕಾರಿಗಳಿರಬಹುದು ಅಥವಾ ತಾಲ್ಲೂಕು ಮಟ್ಟದ ಅಧಿಕಾರಿಗಳಿರಬಹುದು. ಸಂದರ್ಭಕ್ಕೆ ತಕ್ಕಂತೆ ಯೋಜನೆಗಳನ್ನು ತ್ವರಿತವಾಗಿ ಮುಗಿಸಬೇಕೆಂಬ ದೃಷ್ಟಿಯಿಂದ ಈ ಜನರನ್ನು ನೇಮಿಸಿಕೊಂಡಿರುವುದು ನಿಜ. ನಮಗೆ ಜ್ಞಾಪಕವಿರಬಹುದು. 1984ರಲ್ಲಿ ಶ್ರೀಮಾನ್ ದೇವೇಗೌಡರು ಲೋಕೋಪಯೋಗಿ ಸಚಿವರಾಗಿದ್ದ ಸಂದರ್ಭ. ಆಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಒಂದು cut of date ಕೊಟ್ಟು ಇಲ್ಲಿಯವರೆಗೆ ಏನು ರಿಕ್ರೂಟ್‌ಮೆಂಟ್ ಆಗಿದೆ, ಅವರನ್ನೆಲ್ಲಾ ಸೇರಿ even ಗ್ಯಾಂಗ್‌ಮನ್‌ಗಳನ್ನೂ ಸಹ ಪರ್ಮನೆಂಟ್ ಮಾಡಿರುವುದು ಶ್ರೀಮಾನ್ ದೇವೇಗೌಡರು, ರಾಮಕೃಷ್ಣ ಹೆಗಡೆಯವರು ಎಂಬುದು ತಮಗೆ ಗೊತ್ತಿದೆ. ಅದಾದ ನಂತರ ಯಾರನ್ನೂ ಸಹ ರೆಗ್ಯುಲರೈಸ್ ಮಾಡುವುದಕ್ಕಾಗಲಿಲ್ಲ. ಈಗಿನ ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಜೂನ್ ತಿಂಗಳಿನಲ್ಲೋ, ಮೇ ತಿಂಗಳಿನಲ್ಲೋ ಒಂದು ಸುತ್ತೋಲೆ ಹೊರಡಿಸಿದ್ದಾರೆ. ಅದರ ಪ್ರಕಾರ ಅವರು ಕಾನೂನಿನ ಮತ್ತು ಸುಪ್ರೀಂಕೋರ್ಟ್‌ನ ರಕ್ಷಣೆ ತೆಗೆದುಕೊಳ್ಳುವುದಕ್ಕೆ, ನಾಳೆ ದಿನ ಸುಪ್ರೀಂಕೋರ್ಟ್‌ನ ಕಂಟೆಂಪ್ಟ್ ಆಗಬಹುದೆಂಬ ದೃಷ್ಟಿಯಿಂದ ಮುಖ್ಯ ಕಾರ್ಯದರ್ಶಿಗಳು ಆ ಕಂಟೆಂಪ್ಟ್‌ನಿಂದ ತಪ್ಪಿಸಿಕೊಳ್ಳುವುದಕ್ಕೆ ಮತ್ತು ಕಾನೂನಿನ ದೃಷ್ಟಿಯಿಂದಲೂ ಯಾವುದೇ ತಪ್ಪಾಗಬಾರದೆಂದು ಒಂದು ಸುತ್ತೋಲೆ ಕಳುಹಿಸಿದ್ದಾರೆ. ಏಕೆಂದರೆ,

ನಮ್ಮ ಮುಖ್ಯ ಕಾರ್ಯದರ್ಶಿಗಳು ಸಹ ಸರ್ಕಾರಿ ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಮೂಲಕ ಕೆಲಸ ಮಾಡಿಸಬೇಕೆಂಬ ಉದ್ದೇಶವಿದೆ. ಈಗ 17 ಸಾವಿರ ಕುಟುಂಬಗಳಿವೆ. ಸುಮಾರು 1 ಲಕ್ಷ ಜನರ ಬಾಳಿನ ಪ್ರಶ್ನೆಯಾಗುತ್ತದೆ. ಇದರ financial implications, ಬಗ್ಗೆ ನೀವು ರೆಗ್ಯುಲರೈಸ್ ಮಾಡಿದರೆ, ನನ್ನ ಅಭಿಪ್ರಾಯದಲ್ಲಿ ನಾನೂ ಹಣಕಾಸು ಮಂತ್ರಿಯಾಗಿದ್ದ ಸಂದರ್ಭದಲ್ಲಿ ನಮ್ಮ ಇಲಾಖಾಧಿಕಾರಿಗಳೊಂದಿಗೆ ಈ ಕುರಿತು ಚರ್ಚೆ ಮಾಡಿದ್ದೇನೆ. ಏಕೆಂದರೆ ದಿನಗೂಲಿ ನೌಕರರ ಸಂಘದ ಅಧ್ಯಕ್ಷರಾದ ಮಾನ್ಯ ಶರ್ಮಾರವರು ಹುಬ್ಬಳ್ಳಿಯಲ್ಲಿ ಪಲವಾರು ವರ್ಷಗಳ ಕಾಲ ಈ ಜನರ ಪರವಾಗಿ ಹೋರಾಟ ಮಾಡಿ ಧರಣಿಗಳನ್ನು ನಡೆಸಿ ಕೆಳಹಂತದ ಕೋರ್ಟಿನಿಂದ ಸುಪ್ರೀಂಕೋರ್ಟ್‌ನವರೆಗೂ ಹೋಗಿರುವುದು ತಮಗೆ ಗೊತ್ತಿದೆ. ಶರ್ಮಾರವರು ಬಹಳ ದೊಡ್ಡ ಹೋರಾಟಗಾರರು. ಇವೊತ್ತು ಅವರ ನಾಯಕತ್ವದಲ್ಲಿ ಸುಮಾರು 17 ಸಾವಿರ ಜನರು ಬೆಂಗಳೂರಿನಲ್ಲಿ ಇವೊತ್ತಿನಿಂದ ಧರಣಿ, ಮುಷ್ಕರ ಪ್ರಾರಂಭಿಸಿದ್ದಾರೆ. ಅವರು ಮುಷ್ಕರ ಮಾಡಿದ ತಕ್ಷಣ ಎಲ್ಲಾ ಸಮಸ್ಯೆಗಳಿಗೂ ಈ ಸದನದಲ್ಲಿ ಪರಿಹಾರ ಕೊಡಬೇಕೆಂದು ಉಪ ಮುಖ್ಯಮಂತ್ರಿಗಳಿಂದ ಅಥವಾ ಸರ್ಕಾರದಿಂದ ಬಯಸುವುದಿಲ್ಲ. ನಾನು ಬಯಸುವುದೇನೆಂದರೆ, ಅವರಿಗೆ ಭಯವಾಗಿದೆ. ಏನೆಂದರೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹೊರಡಿಸಿರುವ ಆಜ್ಞೆಯ ಹಿನ್ನೆಲೆಯ ಆಧಾರದಲ್ಲಿ ಅವರು ಮುಂದಿನ ತಿಂಗಳಿನಿಂದ ಕೆಲಸ ಕಳೆದುಕೊಳ್ಳುತ್ತೇವೆಂಬ ಭಯವಿದೆ. ಮೊದಲನೆಯದು, ನೀವು ಒಂದು ಪಕ್ಷ ರೆಗ್ಯುಲರೈಸ್ ಮಾಡಿದರೂ ನನಗೆ ಗೊತ್ತಿರುವಂತೆ financial implications ಆಗತಕ್ಕಂಥಾದ್ದು, ಹಣಕಾಸು ಹೊರೆಯಾಗುವುದು 60–65 ಕೋಟಿ ರೂಪಾಯಿಗಳು. ನಮ್ಮ ಖಜಾನೆಯಲ್ಲಿ ಸುಮಾರು 4 ಸಾವಿರ ಕೋಟಿ ರೂಪಾಯಿಗಳಷ್ಟು ದುಡ್ಡಿದೆ.

ಮಾನ್ಯ ಯಡಿಯೂರಪ್ಪನವರೇ, ನೀವೇನು ಆಯವ್ಯಯ ಮಂಡನೆ ಮಾಡುವಾಗ ಖಜಾನೆ ತುಂಬಿ ತುಳುಕುತ್ತಿದೆ, ಅದರ ಬಗ್ಗೆ ನನಗೆ ಸಂತೋಷವಾಗುತ್ತದೆಂದು ಹೇಳಿದ್ದೀರಿ ಅದು ಅಕ್ಷರಶಃ ಸತ್ಯವಾಗಿರತಕ್ಕ ಮಾತು. ನೀವು ಬಿಟ್ಟು ಹೋಗುವಾಗ ಸಹ ಅದೇ ರೀತಿ ತುಂಬಿತುಳುಕುವ ಹಾಗೆ ಮಾಡಿಹೋಗುತ್ತೀರಿ ಎಂಬ ವಿಶ್ವಾಸ ನನಗಿದೆ. ನೀವು ಸದ್ಯದಲ್ಲಿ ಬಿಡುವುದು ಬೇಡ. ಅಲ್ಲೇ ಇರಿ. ಅದನ್ನು ನಡೆಸಿಕೊಂಡು ಹೋಗಿ. ಆದರೆ ನಾನು ಹೇಳತಕ್ಕದ್ದೇನೆಂದರೆ, ನಾಲ್ಕು ಸಾವಿರ ಕೋಟಿ ರೂಪಾಯಿಗಳು ಇರಬೇಕಾದರೆ after all, ಈ ಹದಿನೇಳು ಸಾವಿರ ಜನರೇನು ಕೇಳುತ್ತಿದ್ದಾರೆ, ಅದನ್ನು ಕೊಡಬಹುದು. ಈಗಾಗಲೇ ಅವರಿಗೆ ಸಂಬಳವನ್ನು ಕೊಡುತ್ತಿದ್ದಾರೆ. ಅದನ್ನು ಸ್ವಲ್ಪ ಜಾಸ್ತಿ ಕೇಳುತ್ತಿದ್ದಾರೆ. ಸ್ವಾಭಾವಿಕವಾಗಿ ನಮ್ಮ ಅಧಿಕಾರಿಗಳು ಇದಕ್ಕೆಲ್ಲಾ ಒಪ್ಪಿಗೆ ಕೊಡುವುದಕ್ಕಾಗುವುದಿಲ್ಲ. ಅಲ್ಲಿ ಪೊಲೆಟಿಕಲ್ ಲೀಡರ್‌ಶಿಪ್ ಎಂದು ಇರತಕ್ಕದ್ದು. ಅವರ ಒಂದು ಅಭಿಪ್ರಾಯವನ್ನು ನೀವು ಮನ್ನಣೆ ಮಾಡುತ್ತೇನೆಂದು ಅವರನ್ನೂ ಸಹ ಖುಷಿಯಾಗಿ ಇಟ್ಟುಕೊಂಡು ಅವರ ಅಭಿಪ್ರಾಯವನ್ನು over-rule ಮಾಡಿ ನೀವು ನಿಮ್ಮ ಮುದ್ರೆಯನ್ನು ಹಾಕಿ ಇವರನ್ನು ರೆಗ್ಯುಲರೈಸ್ ಮಾಡುವುದಕ್ಕೆ ಏನಾದರೂ ಒಂದನ್ನು ಮಾಡಿ. ಇದು ನಿಮ್ಮ ಪರಿಶೀಲನೆಯಲ್ಲಿರಲಿ. ಆದರೆ ನಿಮ್ಮಿಂದ ಈವತ್ತು

ಒಂದು ಭರವಸೆಯನ್ನು ನಾನು ಬಯಸುತ್ತೇನೆ. ಏನು ಆ ಭರವಸೆ, ತತ್‌ಕ್ಷಣ ಮಾನ್ಯ ಶರ್ಮಾರವರನ್ನು ಕರೆಸಿಕೊಳ್ಳಿ. ಮಾನ್ಯ ಗೃಹ ಮಂತ್ರಿಗಳು ಇಲ್ಲೇ ಇದ್ದಾರೆ, ಅವರು, ತಾವು ಮಾನ್ಯ ರೇವಣ್ಣನವರು, ಇವರ ಇಲಾಖೆಯಲ್ಲೇ ಬಹಳ ಆಗಿರುವುದು, ನೀವೆಲ್ಲಾ ಸೇರಿಕೊಂಡು, ಅವರನ್ನು ನಾಳೆ ಕರೆಸಿ ಮಾತುಕತೆ ಮಾಡಿ ಮುಖ್ಯಮಂತ್ರಿಗಳೇನೋ ವಿದೇಶಕ್ಕೆ ಹೋಗುತ್ತಾರೆಂದು ಪತ್ರಿಕೆಗಳ ಮೂಲಕ ಕೇಳಲ್ಪಟ್ಟೆ. ಒಂದೆರಡು ತಿಂಗಳಿನಲ್ಲಿ, ಅರಣ್ಯ ಸಚಿವರಾದ ಚೆನ್ನಿಗಪ್ಪ ಸಾಹೇಬರು, ನೀವೆಲ್ಲಾ ಕುಳಿತುಕೊಂಡು ಚರ್ಚೆ ಮಾಡಿ ಅವರನ್ನೆಲ್ಲಾ ಕರೆಸಿ ಮಾತುಕತೆ ಮಾಡಿದರೆ ಅವರು ಮುಷ್ಕರ ನಿಲ್ಲಿಸುತ್ತಾರೆ. ಅವರು ಸಹ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಏನಾದರೂ ಸ್ವಲ್ಪ ಕನ್‌ಸಿಡರ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಅಧ್ಯಕ್ಷರೆ, ಈ ವಿಷಯ ಈಗಾಗಲೇ ಸದನದಲ್ಲಿ ಸಾಕಷ್ಟು ವರ್ಷಗಳಿಂದ ಚರ್ಚೆಯಾಗುತ್ತಲೇ ಇದೆ. ಏಕೆಂದರೆ ದಿನಗೂಲಿ ನೌಕರರನ್ನು ಮಾನವೀಯತೆಯ ಆಧಾರದ ಮೇಲೆ ಖಾಯಂಗೊಳಿಸಬೇಕು ಎನ್ನುವಂಥ ಭಾವನೆಗಳು ಈ ಸದನದಲ್ಲಿ ಸದನ ನಡೆದಾಗಲೆಲ್ಲಾ ವ್ಯಕ್ತವಾಗಿದೆ. ಸರ್ಕಾರಗಳು ಹಿಂದೆ ಯಾವುದೇ ಇದ್ದರೂ ಆ ಎಲ್ಲಾ ಸಂದರ್ಭದಲ್ಲಿ ಈ ಅಭಿಪ್ರಾಯಗಳು ಒಂದು ಸರ್ವಾನುಮತದ ಧ್ವನಿಯಾಗಿ ಸದನದಲ್ಲಿ ಮೂಡಿ ಬಂದಿದೆ. ಆದರೂ ಸರ್ಕಾರದಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲು ಆಗದೇ ಇರುವಂಥ ಇಕ್ಕಟ್ಟಿನ ಸಂದರ್ಭವನ್ನು ನಾವೆಲ್ಲರೂ ಕಾಣುತ್ತಿದ್ದೇವೆ. ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳೆಲ್ಲರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ತಾವು ಅಧಿಕಾರಿಗಳನ್ನು ಅವಲಂಬಿಸಿಕೊಂಡರೆ ನಿಶ್ಚಿತವಾಗಿ ಇವರನ್ನು ಖಾಯಂ ಮಾಡುವುದಕ್ಕೆ ಆಗುವುದೇ ಇಲ್ಲ. ಅವರು ಅದೇ ರೀತಿಯ ಸಲಹೆಯನ್ನೇ ಕೊಡುವುದು. ಹೇಗೆ ಹೈಕೋರ್ಟ್ ಆದೇಶ ಇದೆ, ಸುಪ್ರೀಂ ಕೋರ್ಟ್ ಆದೇಶವಿದೆ, ಯಾವ್ಯಾವ ಪುಸ್ತಕದಲ್ಲಿ ಯಾವ್ಯಾವ ಕಾನೂನು ಏನೇನು ಹೇಳುತ್ತದೆ, ಈ ರೀತಿ ಹೇಳಿ ಹೇಳಿಯೇ ಈ 20–30 ವರ್ಷಗಳ ಕಾಲ ನಾವು ಅವರನ್ನು ಖಾಯಂ ಮಾಡುವುದಕ್ಕೆ ಆಗದೆ ಅವರು ಅತಂತ್ರವಾಗಿರುವ ಜೀವನವನ್ನು ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ಆದ್ದರಿಂದ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ ಆ ಹದಿನೇಳೂವರೆ ಸಾವಿರ ನೌಕರರು ಹಾಗೂ ಅವರ ಮೇಲೆ ಅವಲಂಬಿಸಿರುವ ಅವರ ಕುಟುಂಬ, ಮಕ್ಕಳು ಇದೆಲ್ಲವನ್ನೂ ನೋಡಿದಾಗ ಈ ತಕ್ಷಣದಲ್ಲಿ ಸುಪ್ರೀಂ ಕೋರ್ಟ್‌ಗೂ ಯಾವ ರೀತಿಯಾದ ಉತ್ತರವನ್ನು ಹೇಳಬೇಕೋ ಬೇರೆ ಬೇರೆ ಕಾನೂನಿನಲ್ಲಿ ಯಾವ ರೀತಿಯಾಗಿ ತಿದ್ದುಪಡಿಯನ್ನು ತರಬೇಕೋ ಇವೆಲ್ಲದರ ಬಗ್ಗೆ ತಕ್ಷಣದ ನಿರ್ಧಾರವನ್ನು ತೆಗೆದುಕೊಳ್ಳಬೇಕಾದ ಅಗತ್ಯತೆ ಇದೆ. ನನಗೆ ನಮ್ಮ ಸರ್ಕಾರದ ಬಗ್ಗೆ ವಿಶ್ವಾಸ ಇದೆ. ಈ ರೀತಿ ಅನೇಕ ವಿಷಯಗಳಿಗೆ ಹಿಂದೆ ನಿರ್ಣಯಗಳನ್ನೇ ಮಾಡುವುದಕ್ಕೆ ಆಗದೇ ಇರುವುದರಿಂದ ಇಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಹೊಸ ಸರ್ಕಾರದಲ್ಲಿ ಈ ರೀತಿ ನೆನೆಗುದಿಗೆ ಬಿದ್ದಿರುವ ಅನೇಕ ವಿಷಯಗಳಿವೆ. ಅದರಲ್ಲಿ ಇದು ಒಂದು ಬಹಳ

ಪ್ರಮುಖವಾದುದು. ಮಾನವೀಯ ದೃಷ್ಟಿಯಿಂದ ನೋಡಬೇಕಾದಂಥ ಹಿನ್ನಲೆ ಇರುವಂಥದ್ದು. ಆದ್ದರಿಂದ ಇದಕ್ಕೆ ತ್ವರಿತವಾಗಿ ನಿರ್ಣಯವಾಗುತ್ತದೆ ಎಂಬ ನಂಬಿಕೆ ನನಗಿದೆ. ಆ ರೀತಿ ನಿರ್ಣಯವಾಗಬೇಕು ಎನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತಾ ಒಂದು ಅಂಶವನ್ನು ಈ ಸಂದರ್ಭದಲ್ಲಿ ಹೇಳಲು ಬಯಸುವುದೇನೆಂದರೆ, ಅನೇಕರು ಕೋರ್ಟ್‌ಗೆ ಹೋಗಿ ಖಾಯಂ ಮಾಡಿಕೊಂಡು ಬಂದಿದ್ದಾರೆ. ಒಬ್ಬೊಬ್ಬರು ಈ ರೀತಿ ಕೋರ್ಟ್‌ಗೆ ಹೋಗಿ ಖಾಯಂ ಮಾಡಿಕೊಂಡು ಬರುವುದಕ್ಕೆ ಸಾಧ್ಯವೇ ಇಲ್ಲ ಎಂಬುದು ನಮಗೆ ನಿಮಗೆಲ್ಲರಿಗೂ ಗೊತ್ತಿರುವ ಸಂಗತಿ. ಹಾಗಾಗಿ ಎಲ್ಲಾ ಇಲಾಖೆಯಲ್ಲೂ ಈ ರೀತಿ ದಿನಗೂಲಿ ನೌಕರರು ಇದ್ದಾರೆ. ಹಾಗಾಗಿ ಒಬ್ಬೊಬ್ಬರು ಹೋಗಿ ಈ ರೀತಿ ಮಾಡಿಕೊಂಡು ಬಂದಿರುವ ಉದಾಹರಣೆಗಳೇನಿದೆ ಅದನ್ನೇ ಆಧಾರವಾಗಿ ಇಟ್ಟುಕೊಂಡು ಎಲ್ಲರನ್ನು ಖಾಯಂಗೊಳಿಸುವುದಕ್ಕೆ ಬೇಕಾಗಿರುವ ಸಮಗ್ರವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕಾದ ಅಗತ್ಯತೆ ಇದೆ. ಆ ದಿಕ್ಕಿನಲ್ಲಿ ಯೋಚನೆ ಆಗಲಿ. ಈವತ್ತೇನು ರಾಜ್ಯದ ಎಲ್ಲೆಡೆಯಿಂದ ಹೋರಾಟ ಮಾಡಲು ಬೆಂಗಳೂರಿಗೆ ಬಂದಿದ್ದಾರೆ, ಸರ್ಕಾರದ ಮುಖ್ಯಸ್ಥರು ಅವರನ್ನು ಹೋಗಿ ಭೇಟಿ ಮಾಡಿ ಅವರ ಜೀವನದ ಭದ್ರತೆಯ ಬಗ್ಗೆ ಸರ್ಕಾರದವರು ವಿಶ್ವಾಸವನ್ನು ಕೊಡಬೇಕು. ಅವರು ಗೊಂದಲದಲ್ಲಿದ್ದಾರೆ ಹಾಗೂ ಅತಂತ್ರ ಸ್ಥಿತಿಯಲ್ಲಿದ್ದಾರೆ. ಈ ನೌಕರಿ ಇದೆಯೆಂದು ಅವರುಗಳಿಗೆ ಮದುವೆಯಾಗಿದೆ, ಮಕ್ಕಳಾಗಿದೆ ಅವರು ಇದ್ದ ನೌಕರಿಯನ್ನು ಕಳೆದುಕೊಂಡರೆ ಸಂಸಾರವನ್ನು ಹೇಗೆ ನಡೆಸಬೇಕು? ಹಾಗಾಗಿ ಮಾನವೀಯತೆಯ ದೃಷ್ಟಿಯಲ್ಲಿ ಕಾನೂನಿನ ತೊಡಕು ಏನೇ ಇದ್ದರೂ ಅದನ್ನು ಸರ್ಕಾರದಲ್ಲಿ ನಿರ್ಧಾರ ತೆಗೆದುಕೊಂಡು ಅವರನ್ನು ಖಾಯಂಗೊಳಿಸಬೇಕು. ಈಗ ನಡೆಯುತ್ತಿರುವ ಹೋರಾಟದ ಸಂದರ್ಭದಲ್ಲಿ ನಿಮ್ಮನ್ನು ಖಾಯಂಗೊಳಿಸುವುದಕ್ಕೆ ನಾವು ನಮ್ಮ ರಾಜಕೀಯಶಕ್ತಿಯನ್ನೂ ಸಹ ತೋರಿಸಲು ಸಿದ್ಧರಿದ್ದೇವೆ ಎಂಬ ಭರವಸೆಯನ್ನು ಕೊಡಬೇಕು. ಆ ರೀತಿ ಸರ್ಕಾರ ಅವರಲ್ಲಿ ವಿಶ್ವಾಸ ಮೂಡಿಸುವ ಪ್ರಯತ್ನವನ್ನು ಮಾಡಬೇಕು ಎಂಬ ವಿನಂತಿಯನ್ನು ತಮ್ಮ ಮೂಲಕ ಮಾಡಲು ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ದಿನಗೂಲಿ ನೌಕರರ ಸಮಸ್ಯೆ ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕ ಸಮಸ್ಯೆ. ಬಂದಂಥ ಎಲ್ಲಾ ಮುಖ್ಯಮಂತ್ರಿಗಳು, ಸರ್ಕಾರಗಳು ಅವರಿಗೆ ಆಶ್ವಾಸನೆ ಕೊಟ್ಟಿದೆ. ನಿಮ್ಮ ಸಮಸ್ಯೆಯನ್ನು ಬಗೆಹರಿಸುತ್ತೇವೆ, ಪರಿಶೀಲಿಸುತ್ತೇವೆ, ಖಾಯಂ ಮಾಡುತ್ತೇವೆಂದು ಎಲ್ಲಾ ಹೇಳಿಕೊಂಡೇ ಬಂದಿದೆ. ಆದರೆ ಇಷ್ಟು ವರ್ಷಗಳಾದರೂ ಕೂಡ ಆ ಸಮಸ್ಯೆ ಪರಿಹಾರವಾಗದೆ ಕೊನೆಗೆ ಸುಪ್ರೀಂಕೋರ್ಟ್‌ನವರು ತೀರ್ಪು ಕೊಟ್ಟು ಅವರ್ಯಾರನ್ನೂ ಖಾಯಂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳತಕ್ಕ ಒಂದು ತೀರ್ಮಾನವನ್ನು ಕೊಟ್ಟಿದೆ. ಈಗ ಈ ತೀರ್ಪನ್ನು ಆಧಾರವಾಗಿಟ್ಟುಕೊಂಡು ಸರ್ಕಾರ ನನ್ನ ಕೈಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಕೈ ಸುಪ್ರೀಂಕೋರ್ಟ್ ಕಟ್ಟಿ ಹಾಕಿದೆ ಎಂದು ಹೇಳತಕ್ಕ ವಾದವನ್ನು ಮೂಡಿಸುತ್ತಿದೆ. ಈ ಬೆನ್ನ ಹಿಂದೆಯೇ ಕಾರ್ಯದರ್ಶಿಯವರು

ಇವರನ್ನೆಲ್ಲಾ ತತ್‌ಕ್ಷಣದಿಂದ ಕೆಲಸದಿಂದ ವಜಾ ಮಾಡಿ ಆದೇಶ ಮಾಡಿದ್ದಾರೆ. ನಾವೊಂದು ಜವಾಬ್ದಾರಿ ಸ್ಥಾನದಲ್ಲಿರತಕ್ಕ ಜನ ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಹದಿನೇಳು ಸಾವಿರ ಕುಟುಂಬದ ಪರಿಸ್ಥಿತಿ ಏನು? ಹದಿನೇಳು ಸಾವಿರ, ಬರೀ ನೌಕರರಲ್ಲ. ಪ್ರತಿಯೊಬ್ಬ ನೌಕರರಿಗೆ ಒಂದು ಕುಟುಂಬ ಇದೆ. ಹದಿನೇಳು ಸಾವಿರ ಕುಟುಂಬಗಳು ಈವತ್ತು ಬೀದಿಪಾಲಾಗುತ್ತದೆ. ಹಾಗಾದರೆ ನಮಗೆ ಮತ್ತು ಸರ್ಕಾರಕ್ಕೆ ಯಾವುದೇ ಸಾಮಾಜಿಕ ಜವಾಬ್ದಾರಿ ಇಲ್ಲವೆ? ಬರೀ ಸುಪ್ರೀಂ ಕೋರ್ಟ್ ಕಾನೂನಿನ ಹೆಸರನ್ನು ಹೇಳಿಕೊಂಡು ನಾವು ನುಣುಚಿಕೊಳ್ಳಬೇಕೇ ಅಥವಾ ನಮ್ಮ ಸರ್ಕಾರಗಳಿಗೆ ಜನಪ್ರತಿನಿಧಿಗಳಾಗಿರುವ ನಮಗೆ ಒಂದು ಸಾಮಾಜಿಕವಾದ ಜವಾಬ್ದಾರಿ ಎಂಬುದು ಇದ್ದರೆ ಈ ಸಮಸ್ಯೆಗಳಿಗೆ ಪರಿಹಾರ ಹುಡುಕತಕ್ಕದ್ದು ನಮ್ಮ ಜವಾಬ್ದಾರಿ. ಅದನ್ನು ಯಾವ ರೀತಿಯಾಗಿ ಹುಡುಕಬೇಕು, ಹೇಗೆ ಹುಡುಕಬೇಕು ಎನ್ನತಕ್ಕದ್ದನ್ನು ಕಾನೂನು ಪಂಡಿತರನ್ನು ಕೂರಿಸಿ ಅವರನ್ನು ಕರೆದುಕೊಂಡು ಬಂದು ಮಾತನಾಡಿ ಆ ಸಮಸ್ಯೆಗೆ ಪರಿಹಾರವನ್ನು ಹುಡುಕಲೇ ಬೇಕು. It is our social responsibility. Legal obliations ಅಲ್ಲವೆಂದು ನೀವು ಹೇಳಿದರೂ ಕೂಡ, court legal ಆಗಿ ಕ್ರಮ ತೆಗೆದುಕೊಂಡಿದೆ ಎಂದು ಹೇಳಿದರೂ, ನಮ್ಮ ಸಾಮಾಜಿಕ ಜವಾಬ್ದಾರಿ ಇದೆ. ಆ ಸಮಸ್ಯೆಯನ್ನು ಪರಿಹಾರ ಮಾಡಲೇಬೇಕು. ಅದು ನಮ್ಮೆಲ್ಲರ ಕರ್ತವ್ಯ ಕೂಡ ಆಗಿದೆ. ಹಾಗಾಗಿ ಸರ್ಕಾರ ಇದನ್ನು ಗಂಭಿರವಾಗಿ ತೆಗೆದುಕೊಂಡು ನಮ್ಮ ಸಾಮಾಜಿಕ ಜವಾಬ್ದಾರಿ ಎಂದು ತಿಳಿದು ಅದಕ್ಕೆ ಪರಿಹಾರವನ್ನು ಹುಡುಕಬೇಕು. ಆದರೆ ಅದರಲ್ಲಿ ಹಲವಾರು ತೊಡಕುಗಳು, ತೊಂದರೆಗಳು ಇದೆ. ಕಾನೂನಿನ ಪ್ರಶ್ನೆಗಳು ಬರುತ್ತದೆ. ರೋಸ್ಟರ್ ಸಿಸ್ಟಂ ಬರುತ್ತದೆ, ಇವೆಲ್ಲವೂ ಬರುತ್ತದೆ. ಆದರೆ ಇಲ್ಲಿ ಮೂಲಭೂತವಾಗಿ ತಪ್ಪಾಗಿರತಕ್ಕದ್ದು ಎಲ್ಲಿ ಎಂದರೆ, ಹಿಂದೆ ಸುಪ್ರೀಂಕೋರ್ಟ್ ಒಂದು ತೀರ್ಮಾನ ಕೊಟ್ಟಿತ್ತು. ಒಂದು cut-off date ಕೊಟ್ಟು ಈ ಡೇಟ್‌ವರೆಗೆ ಯಾರ್ಯಾರನ್ನು ನೀವು ದಿನಗೂಲಿ ನೌಕರರನ್ನಾಗಿ ತೆಗೆದುಕೊಂಡಿದ್ದೀರೋ ಅವರನ್ನೆಲ್ಲಾ ಖಾಯಂ ಮಾಡಿ. ಇನ್ನು ಮುಂದೆ ಯಾರನ್ನೂ ದಿನಗೂಲಿ ನೌಕರರನ್ನಾಗಿ ತೆಗೆದುಕೊಳ್ಳಬಾರದು ಎಂದು clear direction ನ್ನು ಸುಪ್ರೀಂ ಕೋರ್ಟ್ ಕೊಟ್ಟಿದೆ. ಆದರೆ ಆ ಡೈರೆಕ್ಷನ್‌ನನ್ನು ಉಲ್ಲಂಘನೆ ಮಾಡಿ ಕೆಲವು ಇಲಾಖೆಗಳಲ್ಲಿ ಯಾವ್ಯಾವುದೋ ಕಾರಣಕ್ಕೋಸ್ಕರ ದಿನಗೂಲಿ ನೌಕರರನ್ನು ಸೇರಿಸಿಕೊಂಡು ಈವತ್ತು ಅವರು ಬೀದಿಗೆ ಬಿಸಾಕಿಬಿಟ್ಟರೆ ಅವರ ಗತಿ ಏನಾಗಬೇಕು? ಇದು ಯಾರ ಜವಾಬ್ದಾರಿ? ಸುಪ್ರೀಂ ಕೋರ್ಟ್ ಆವತ್ತು clear direction ಕೊಟ್ಟಿದ್ದರೂ ಕೂಡ ಅದನ್ನು ಉಲ್ಲಂಘನೆ ಮಾಡಿ ಬೇಕಾಬಿಟ್ಟಿಯಾಗಿ ಯಾವ್ಯಾವುದೊ ಕಾರಣಕ್ಕೆ ಇವರನ್ನು ತೆಗೆದುಕೊಂಡು, ಈಗ ಆ ಹದಿನೇಳೂವರೆ ಸಾವಿರ ನೌಕರರನ್ನು ಬೀದಿಗೆ ಬಿಸಾಕತಕ್ಕದ್ದು ತೀರ ಅಮಾನವೀಯವಾದ ಕೆಲಸವಾಗುತ್ತದೆ. ನನಗೆ ಒಂದು ಸಣ್ಣ ಸಲಹೆಯನ್ನು ಕೊಡುವುದಕ್ಕಿದೆ. ನಮ್ಮ ಸಂವಿಧಾನದ Art. 31 (ಸಿ) ನಲ್ಲಿ ಒಂದು ಅವಕಾಶ ಇದೆ. ಸರ್ಕಾರ ಅದರ ಬಗ್ಗೆ ಏನಾದರೂ ಆಲೋಚನೆ ಮಾಡಬೇಕು. 31(ಸಿ) ಏನು ಹೇಳುತ್ತದೆಂದರೆ :–

"Notwithstanding anything contained in Article 13, no law giving effect to the policy of the State towards securing all or any of the Principles laid down in Part-VI shall be deemed to be void on the ground that it is inconsistent with, or takes away or abridges any of the rights conferred by Article 10 or Article 19 and no law containins a declaration that it is for giving effect to such policy shall be called in question in any court on the ground that it does not give effect to such policy.

Provided that where such law is made by the Legislature of a State, the provisions of this Article shall not apply thereto unless such law, having been reserved for the consideration of the President, has received his assant".

ಇದು ಒಂದು ಅವಕಾಶ. ಇದನ್ನು ಪರಿಗಣನೆ ಮಾಡಬಹುದು. ಇದರ ಕೆಳಗಡೆ Directive Principlea of State Policy ನ್ನು implement ಮಾಡುವುದಕ್ಕೆ ಒಂದು ಕಾನೂನನ್ನು ತರುವುದಕ್ಕೆ ಅವಕಾಶ ಇದೆ. ಅದನ್ನು ಉಪಯೋಗಿಸಿಕೊಳ್ಳಬಹುದು. ಅದರ ಆಧಾರದ ಮೇಲೆ ಸುಪ್ರೀಂ ಕೋರ್ಟ್ 1991ರಲ್ಲಿ ಒಂದು judgement ನ್ನು ಕೊಟ್ಟಿದೆ. Elizabeth V/s. State of Kerala. ಅದು A.I.R. ನಲ್ಲಿ report ಆಗಿದೆ. ಅದರಲ್ಲಿ ಈ ರೀತಿಯಾದಂಥ ಪರಿಹಾರವನ್ನು ಹುಡುಕಲು ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಆರ್ಟಿಕಲ್ 31 (ಸಿ) ಯಲ್ಲಿರುವ ಅವಕಾಶವನ್ನು ಉಪಯೋಗಿಸಿಕೊಂಡು ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೆ ಎನ್ನತಕ್ಕದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂಬುದು ನನ್ನ ವಿನಂತಿ.

ಅದರ ಜೊತೆಗೆ ನಾನು ಹೇಳತಕ್ಕದ್ದು ಏನೆಂದರೆ, ಅವರಿಗೆ ಇವತ್ತು ಈ ಸದನದಿಂದ ಒಂದು assurance ಹೋಗಬೇಕು. ಈ ಸದನದಲ್ಲಿ ನಮ್ಮ ಸಮಸ್ಯೆ ಚರ್ಚೆಯಾಗಿದೆ. ಜನಪ್ರತಿನಿಧಿಗಳು ನಮ್ಮ ಪರವಾಗಿ ಅಲ್ಲಿದ್ದಾರೆ ಅನ್ನತಕ್ಕಂಥ ಭಾವನೆ ಅವರಲ್ಲಿ ಮೂಡಬೇಕಾದರೆ ಅವರನ್ನು ಯಾವುದೇ ಕಾರಣದಿಂದ ತೆಗೆದು ಹಾಕುವುದಿಲ್ಲ ಎಂದು ಭರವಸೆ ಕೊಡಬೇಕು. ಅವರನ್ನು ಪರ್ಮನೆಂಟ್ ಮಾಡುತ್ತೇವೆ ಎಂದು ಈಗ ನೀವು ಆಶ್ವಾಸನೆ ಕೊಡಿ ಎಂದು ನಾವು ಕೇಳುತ್ತಿಲ್ಲ. ಅದು ಎಷ್ಟರಮಟ್ಟಿಗೆ ಸಾಧು ಆಗುತ್ತದೋ ನಮಗೆ ಗೊತ್ತಿಲ್ಲ. ಅದರ ಬಗ್ಗೆ ನಾವು ಹೇಳುತ್ತಿಲ್ಲ. ನಾವು ಯಾವುದೇ ಕಾರಣದಿಂದ ಅವರನ್ನು ತೆಗೆದು ಹಾಕುವುದಿಲ್ಲ ಎಂದು ಹೇಳತಕ್ಕಂಥ ಒಂದು ಸ್ಪಷ್ಟವಾದಂತಹ ಭರವಸೆ ಈ ಸದನದಿಂದ ಆ ಹದಿನೇಳು ಸಾವಿರ ಕುಟುಂಬಗಳಿಗೆ ಹೋಗಬೇಕು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಉಪಾಧ್ಯಕ್ಷರೆ, ಸುಮಾರು ವರ್ಷಗಳಿಂದ ದಿನಗೂಲಿ ನೌಕರರು ಈ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಯಾವ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆ, ಅವರ ಪರಿಸ್ಥಿತಿ ಏನಿದೆ? ಅವರು ಯಾವ ರೀತಿಯಾಗಿ ಜೀವನ ನಡೆಸುತ್ತಿದ್ದಾರೆ ಎಂಬ ಬಗ್ಗೆ ಎಲ್ಲಾ ಸದಸ್ಯರು ಹೇಳಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು 800 ಜನ ದಿನಗೂಲಿ ನೌಕರರು ಇದ್ದಾರೆ. ಅವರು ಸುಮಾರು ವರ್ಷಗಳಿಂದ ತಮ್ಮನ್ನು ಖಾಯಂಗೊಳಿಸುವಂತೆ ಹೋರಾಟ ಮಾಡುತ್ತಿದ್ದಾರೆ. ದಿನಗೂಲಿ ನೌಕರರ ಸಮಸ್ಯೆಗಳ ಬಗ್ಗೆ ಇವತ್ತು ಸರ್ಕಾರ ವಿಶೇಷ ಕಾಳಜಿ ವಹಿಸುತ್ತಿಲ್ಲ. ಈ ಸರ್ಕಾರ ನಾವು ಪ್ರಗತಿ ಪರವಾಗಿ ಕೆಲಸ ಮಾಡುತ್ತೇವೆ ಎನ್ನುವಂತಹ ಆಶ್ವಾಸನೆಯನ್ನು ಇಲ್ಲಿಯವರೆಗೂ ಕೊಟ್ಟಿಲ್ಲ. ಈಗಲಾದರೂ ಈ ಸರ್ಕಾರ ಅವರ ಬಗ್ಗೆ ತಕ್ಷಣ ಗಮನ ಹರಿಸಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಅವರನ್ನು ಕೆಲಸದಿಂದ ತೆಗೆಯುವುದಿಲ್ಲ ಎನ್ನುವಂತಹ ಆಶ್ವಾಸನೆ ಕೊಡುವುದಲ್ಲದೆ ಅವರ ಸಂಬಳವನ್ನು ಹೆಚ್ಚಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಸುಪ್ರೀಂ ಕೋರ್ಟ್ verdict ಇದೆ ಎಂಬ ಕಾರಣದಿಂದ ಅವರನ್ನು ಕೆಲಸದಿಂದ ತೆಗೆದು ಹಾಕಿದರೆ, ಅವರು ಇವತ್ತು ಬೀದಿ ಪಾಲಾಗುತ್ತಾರೆ. ಈ ಸರ್ಕಾರ BMIC ಯೋಜನೆ ಸಂಬಂಧದಲ್ಲಿ ಸುಪ್ರೀಂಕೋರ್ಟ್ ನೀಡಿರುವ verdict ಗೆ ನಾವು ಕಾನೂನು ತರುತ್ತೇವೆ ಎನ್ನುವ ಮಟ್ಟಕ್ಕೆ ಹೋಗುತ್ತಿದೆ. ಆದರೆ ಇವತ್ತು ಜನಪರವಾದ ದಿನಗೂಲಿ ನೌಕರರ ಬಗ್ಗೆ ನಾವೊಂದು ಲಾ ತರುತ್ತೇವೆ ಎಂದು ಹೇಳತಕ್ಕಂಥ ಹೇಳಿಕೆಗಳನ್ನೇಕೆ ನಾಯಕರು ಕೊಡುತ್ತಿಲ್ಲ? In the interest of public ಅಂತಹ ಒಂದು ಕಾನೂನನ್ನು ತರಬೇಕು. ಸುಮಾರು 17 ಸಾವಿರ ಕುಟುಂಬಗಳ ಪ್ರಶ್ನೆ ಇಲ್ಲಿದೆ. ಅವರಿಗೆ ಸರ್ಕಾರ ಅನುಕೂಲ ಮಾಡಿಕೊಡಬೇಕು. ಅವರ ಸಂಬಳವನ್ನು ಹೆಚ್ಚಿಸತಕ್ಕ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಉಪಾಧ್ಯಕ್ಷರೆ, ಈ ಡೈಲಿ ವೇಜಸ್ ಎಂಪ್ಲಾಯೀಸ್ ಬಗ್ಗೆ ಬಹಳ ಜನ ಸದಸ್ಯರು ಚೆನ್ನಾಗಿ ಮಾತನಾಡಿದರು. ಬಹಳ ಮುಖ್ಯವಾದ ವಿಚಾರವೇನೆಂದರೆ, ಈ ಸದನದಲ್ಲಿ ಈ ತರಹದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ. ಕಳೆದ ಬಾರಿ ನಮ್ಮದೇ ಸರ್ಕಾರ ಇದ್ದಾಗ Education Department ನಲ್ಲಿ ಸುಮಾರು ಜನರನ್ನು ಮತ್ತು Animal Husbandry Department ನಲ್ಲಿ ಸುಮಾರು 300 ಜನ ಡಾಕ್ಟರ್ಸ್‌ಗಳನ್ನು at a time, regularize ಮಾಡಿದಂತಹ ಉದಾಹರಣೆಗಳಿವೆ. ಅದನ್ನು ಮಾಡಿದಂತಹ ಮಾನ್ಯ ಮಿರಾಜುದ್ದೀನ್ ಪಟೇಲ್ ಸಾಹೇಬರು ಸದನದಲ್ಲೇ ಇದ್ದಾರೆ. ಅದೇ ರೀತಿಯಾಗಿ ಮಾನ್ಯ ಚೆಲುವರಾಯಸ್ವಾಮಿಯವರು 380 ಆರ್ಯುವೇದಿಕ್ ಡಾಕ್ಟರ್ಸ್‌ಗಳನ್ನು ರೆಗ್ಯೂಲರೈಸ್ ಮಾಡಿದರು. ಅದರ ಜೊತೆಗೆ 600–700 ಜನ ಡಾಕ್ಟರ್ಸ್, ನರ್ಸಸ್, ಎಎನ್‌ಎಂ ಸೇರಿ 5–6 ವರ್ಷ ಸರ್ವೀಸ್ ಆದಂತಹ ಸುಮಾರು ಒಂದೂವರೆ ಸಾವಿರ ಜನರನ್ನು ರೆಗ್ಯುಲರೈಸ್ ಮಾಡಿದಂತಹ ಇತಿಹಾಸ ನಮ್ಮ ಸರ್ಕಾರದಲ್ಲಿದೆ. ನಮ್ಮ ಸರ್ಕಾರ ನೌಕರರ ಬಗ್ಗೆ ಅತೀವ ಕಾಳಜಿ ವಹಿಸಿರತಕ್ಕಂಥ

ಉದಾಹರಣೆಗಳಿವೆ. ಶಿಕ್ಷಕರಿಗೆ ಎಕ್ಸ್-ಗ್ರೇಷಿಯಾ ರೂಪದಲ್ಲಿ 200 ರೂಪಾಯಿಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. ಜೊತೆಗೆ ನೌಕರರು ಇನ್ನೂ ಸ್ಟ್ರೈಕ್ ಮಾಡದೆ ಇರುವಾಗಲೇ ಅರ್ಧ ದಿವಸದಲ್ಲೇ Interim relief ಅನ್ನು ನಮ್ಮ ಸರ್ಕಾರ ಘೋಷಣೆ ಮಾಡಿತು. ನಮ್ಮ ಸರ್ಕಾರದಲ್ಲಿ ಬಹಳ ಉತ್ಸಾಹಶಾಲಿಗಳು ಆಗಿರತಕ್ಕಂಥ ಸಚಿವರಾಗಿದ್ದಾರೆ. ನಾನು ಒಂದನ್ನು ಇಲ್ಲಿ ಹೇಳಬಯಸುತ್ತೇನೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಯಾರನ್ನೂ ಕೂಡ ರೆಗ್ಯುಲರೈಸ್ ಮಾಡಬೇಡಿ ಎಂದೇನೂ ಹೇಳಿಲ್ಲ. ಆದರೆ ಹಿಂದೆ 1991ರಲ್ಲಿ ಒಂದು ಜಡ್ಜ್‌ಮೆಂಟ್ ಆಗಿದೆ. 10 ವರ್ಷ ಕಂಪ್ಲೀಟ್ ಸೇವೆ ಮಾಡಿದವರನ್ನು ರೆಗ್ಯುಲರೈಸ್ ಮಾಡಿ ಎಂದು ಜಡ್ಜ್‌ಮೆಂಟ್ ಹಿಂದೆ ಆಗಿದೆ. ಸನ್ಮಾನ್ಯ ಶರ್ಮರವರು ಇದಕ್ಕೆ ಹೋರಾಟ ಮಾಡಿದ್ದರಿಂದ, ಸಾವಿರಾರು ಜನ ಇವತ್ತು ರೆಗ್ಯುಲರೈಸ್ ಆಗಿ pension ತೆಗೆದುಕೊಳ್ಳುತ್ತಿರುವಂತಹ ಇತಿಹಾಸ ಈ ಸರ್ಕಾರದಲ್ಲಿದೆ. ಆದರೆ ಇವತ್ತು ಕೆಲವು ಅಧಿಕಾರಿಗಳು ತಮ್ಮ ಕೆಟ್ಟ ಚಿಂತನೆಯನ್ನು ಹರಿಸಿ, ಅವರನ್ನು ಕೆಲಸದಿಂದ ತೆಗೆಯಬೇಕು ಎನ್ನತಕ್ಕಂಥ ಸುತ್ತೋಲೆಯನ್ನು ಹೊರಡಿಸಿರುವುದು ನಿಜವಾಗಿಯೂ ವಿಷಾದಕರ, ಇದು ಬಹಳ ನೋವು ತರುವಂತಹ ವಿಚಾರವಾಗಿದೆ. ಸುಮಾರು 17 ಸಾವಿರ ಜನ, ಈ recruitment stop ಆದಮೇಲೆ, ಬಹಳ ಜನ daily wages employees, contract employees ಇವತ್ತು ಕೆಲಸವನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ APMC ಇಲಾಖೆಯಲ್ಲಿ ಇಬ್ಬರು daily wages employees ಬಿಟ್ಟರೆ ಮತ್ತೊಬ್ಬರು staff ಅಲ್ಲಿ ಇಲ್ಲ. ಅವರಿಬ್ಬರೇ ಇಡೀ ಇಲಾಖೆಯನ್ನೇ ನಡೆಸುತ್ತಿರತಕ್ಕಂಥ ಇತಿಹಾಸ ಇದೆ. ಇವತ್ತು ಅದೇ ರೀತಿಯಾಗಿ ಬಹುತೇಕ ಇಲಾಖೆಗಳಲ್ಲಿ, ಅದು PWD ಇರಬಹುದು ಅಥವಾ ಇತರ ಇಲಾಖೆಗಳು ಇರಬಹುದು, ಅದೇ ರೀತಿ ನಡೆಯುತ್ತಿದೆ. ನಮ್ಮ ಮಾನ್ಯ ಖರ್ಗೆಯವರು ಇವತ್ತು ಸದನದಲ್ಲಿ ಇಲ್ಲ. ಕಳೆದ ಸುಮಾರು ಒಂದು-ಒಂದೂವರೆ ವರ್ಷದಲ್ಲಿ ಮೂರು ಸಾವಿರ ಇಂಜಿನಿಯರ್ಸ್‌ಗಳನ್ನು at a time regularize ಮಾಡಿದಂತಹ ಇತಿಹಾಸ ಇವತ್ತು ಈ ರಾಜ್ಯದಲ್ಲಿದೆ. PWD ಇರಬಹುದು, ಹೇಮಾವತಿ ಯೋಜನೆ ಇರಬಹುದು, Irrigation Department ಇರಬಹುದು, ಸುಮಾರು ಮುರು ಸಾವಿರ ಜನ ಇಂಜಿನಿಯರ್ಸ್‌ಗಳನ್ನು ರೆಗ್ಯುಲರೈಸ್ ಮಾಡಲಾಗಿದೆ. ಅದರಲ್ಲಿ Junior Enginers, AEE, EE ಎಲ್ಲರನ್ನೂ ಸಹ ರೆಗ್ಯುಲರೈಸ್ ಮಾಡಿ ಇವತ್ತು ಸರ್ಕಾರ ಆದೇಶ ಹೊರಡಿಸಿದೆ. ದುರ್ದೈವ, ಸುಮಾರು 18-20 ವರ್ಷ ಕೆಲಸ ಮಾಡಿದಂತಹ daily rated employees ಇವತ್ತು ಬೀದಿಗೆ ಇಳಿದಿದ್ದಾರೆ ಎಂದರೆ ಇದು ಕ್ಷಮಿಸುವಂತಹ ವಿಚಾರವಲ್ಲ, ಇದು ನಮಗೆ ಬಹಳ ದುಃಖ ತಂದಿದೆ. ನಾನು ಈ ಸದನದಲ್ಲಿ ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಈ 17 ಸಾವಿರ ಜನರಲ್ಲಿ ಬಹಳಷ್ಟು ಜನ on the verge of retirement ಇದ್ದಾರೆ, ಸುಮಾರು 50-52 ವರ್ಷಗಳಾಗಿರುವಂತಹ ಗ್ಯಾಂಗ್‌ಮೆನ್‌ಗಳಿದ್ದಾರೆ. ಅವರನ್ನು ಇನ್ನೂ ರೆಗ್ಯುಲರೈಸ್ ಮಾಡಿಲ್ಲ. ಅವರು ಸುಮಾರು 700-800 ರಿಂದ 2000 ರೂಪಾಯಿಗಳವರೆಗೆ ಸಂಬಳ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ನಾನು

ತಮ್ಮಲ್ಲಿ ಈ ಸದನದ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಮುಖ್ಯ ಕಾರ್ಯದರ್ಶಿಯವರಿಗೆ ಅವರ ಸಂಘದವರನ್ನು ಕೂಡಲೇ ಕರೆದು ಚರ್ಚೆ ಮಾಡುವುದರ ಮುಖಾಂತರ ಅವರ ಬೇಡಿಕೆಗಳನ್ನು ಚರ್ಚಿಸಿ ಈಡೇರಿಸಬೇಕೆಂದು ಹೇಳಬೇಕು. ಇವತ್ತು ಅವರನ್ನು ರೆಗ್ಯುಲರೈಸ್ ಮಾಡದಿರಬಹುದು. ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡರೆ ಅದೇನೂ ದೊಡ್ಡ ವಿಚಾರವೇನಲ್ಲ. ರೆಗ್ಯುಲರೈಸ್ ಮಾಡಿರುವಂತಹ ನೂರಾರು ಇತಿಹಾಸಗಳು ಈ ರಾಜ್ಯದಲ್ಲಿವೆ. ಈ ನಿಟ್ಟಿನಲ್ಲಿ ಇವತ್ತು Legislature Secretariat ನಲ್ಲಿ ಸುಮಾರು 200–300 ಜನ ಇವತ್ತು contract basis ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಒಂದು ದಿವಸ ರೆಗ್ಯುಲರೈಸ್ ಆಗುತ್ತಾರೆ, ಅವರಿಗೇನೂ ತೊಂದರೆ ಇಲ್ಲ. ಯಾರು ಬಿಸಿಲಿನಲ್ಲಿ ಮಣ್ಣು ಹೊರುವಂತಹ ಜನರಿದ್ದಾರೋ, ಕೂಲಿ ಮಾಡತಕ್ಕಂಥ ಜನರಿದ್ದಾರೋ ಮತ್ತು ಇಂಜಿನಿಯರಿಂಗ್ ಇಲಾಖೆಯಲ್ಲಿ ಕೆಲಸ ಮಾಡತಕ್ಕವರಿದ್ದಾರೋ ಅವರನ್ನು ಕೂಡಲೇ ರೆಗ್ಯುಲರೈಸ್ ಮಾಡಬೇಕು. ಅವರಲ್ಲಿ Backward classes and Minority ವರ್ಗಕ್ಕೆ ಸೇರಿದವರೇ ಹೆಚ್ಚಾಗಿದ್ದಾರೆ. ಅವರನ್ನು ರೆಗ್ಯುಲರೈಸ್ ಮಾಡದೆ ಬಹಳ ಅನ್ಯಾಯವಾಗಿದೆ. ದಯಮಾಡಿ ನಾನು ಸದನವನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಮುಖ್ಯ ಕಾರ್ಯದರ್ಶಿಯವರಿಗೆ ಸೂಕ್ತ ನಿರ್ದೇಶನ ನೀಡುವುದರ ಮುಖಾಂತರ, ಅವರನ್ನು ಕರೆಸಿ ಚರ್ಚೆ ಮಾಡಿ, ಯಾರನ್ನೂ ಸಹ retrench ಮಾಡದೆ regularize ಮಾಡಲಿಕ್ಕೆ ತಾವು ಆದೇಶ ಹೊರಡಿಸುವುದಕ್ಕೆ ಮುಂದಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇವತ್ತು ಇಲ್ಲ. ಆದರೆ ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ನಾನು ಇವತ್ತು ಅವರನ್ನು ವಿನಂತಿಸಿಕೊಳ್ಳುತ್ತೇನೆ. ದಯಮಾಡಿ ಅವರನ್ನೆಲ್ಲಾ ರೆಗ್ಯುಲರೈಸ್ ಮಾಡಲಿಕ್ಕೆ ಆದೇಶವೊಂದನ್ನು ಮಾಡಬೇಕೆಂದು ತಮ್ಮೆಲ್ಲರ ಪರವಾಗಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಹಿರಿಯ ಸದಸ್ಯರಾದಂತಹ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಆರಗ ಜ್ಞಾನೇಂದ್ರರವರು, ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು, ಮಾನ್ಯ ವಿಶ್ವೇಶ್ವರ ಹೆಗಡೆಯವರು ಮತ್ತು ಇತರ ಎಲ್ಲಾ ಶಾಸಕ ಮಿತ್ರರು ಈ ದಿನಗೂಲಿ ನೌಕರರ ಇವತ್ತಿನ ಪರಿಸ್ಥಿತಿ, ಇವತ್ತೇನು ಸಾವಿರಾರು ಜನ ಬಂದು ತಮ್ಮ ನ್ಯಾಯವಾದ ಬೇಡಿಕೆ ಈಡೇರಬೇಕೆಂದು ಸತ್ಯಾಗ್ರಹವನ್ನೇನು ಮಾಡುತ್ತಿದ್ದಾರೋ, ಅದರ ಬಗ್ಗೆ ಗಮನ ಸೆಳೆಯುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಮಾನವೀಯತೆಯ ದೃಷ್ಟಿಯಿಂದ ಇದರ ಬಗ್ಗೆ ನಾವೆಲ್ಲಾ ಒಟ್ಟಾಗಿ ಕುಳಿತು ಯೋಚನೆಯನ್ನು ಮಾಡಬೇಕಾಗಿದೆ. ಈಗಾಗಲೇ ಸುಪ್ರೀಂ ಕೋರ್ಟ್ ಬಹಳ ಸ್ಪಷ್ಟವಾಗಿ ಅದರ ತೀರ್ಪನ್ನು ಕೊಟ್ಟಿದೆ. ಈ ತೀರ್ಪಿನ ಹಿನ್ನೆಲೆಯಲ್ಲಿ ಇವತ್ತು ನಮ್ಮ ಮುಖ್ಯ ಕಾರ್ಯದರ್ಶಿಗಳು ಸುತ್ತೋಲೆಯೊಂದನ್ನು ಕಳುಹಿಸಿಕೊಟ್ಟಿದ್ದಾರೆ. ಅದು ಸರ್ಕಾರಿ ಆಜ್ಞೆ ಇರಲಿ, ಸುತ್ತೋಲೆ ಇರಲಿ, ಅದನ್ನು ವಾಪಸ್ ತೆಗೆದುಕೊಳ್ಳುವಂತಹ ಅಧಿಕಾರ ಸರ್ಕಾರಕ್ಕಿದೆ, ಅದೇನೂ ಪ್ರಶ್ನೆಯಲ್ಲ. ನಾನು ಈ ಮನೆಯಲ್ಲಿ ಒಂದು ಭರವಸೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೇ

ಕಾರಣಕ್ಕೆ, ಇವತ್ತು ದಿನಗೂಲಿ ನೌಕರರೇನು ಕೆಲಸ ಮಾಡುತ್ತಿದ್ದಾರೋ, ಅವರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ, ಈ ಸುತ್ತೋಲೆಯ ಆಧಾರದ ಮೇಲೆ ಅವರನ್ನು ಕೆಲಸದಿಂದ ತೆಗೆಯುವುದು, ಮತ್ತೊಂದು ಮಾಡುವುದು, ಈ ಪ್ರಕ್ರಿಯೆಗೆ ಅವಕಾಶ ಕೊಡದೆ, ಮಾನವೀಯತೆ ದೃಷ್ಟಿಯಿಂದ ಅವರಿಗೆ ರಕ್ಷಣೆ ಕೊಡುವಂತಹ ಜವಾಬ್ದಾರಿ ನಮ್ಮ ಸರ್ಕಾರಕ್ಕಿದೆ. ಆ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಿದ್ದೇನೆ. ಎರಡನೆಯದಾಗಿ ಸುಪ್ರೀಂ ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಇವತ್ತಿನ ನಮ್ಮ ಹಣಕಾಸಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಾನವೀಯತೆ ದೃಷ್ಟಿಯಿಂದ ನಾವು ಏನು ಮಾಡಬಹುದು ಎಂದು ಯೋಚಿಸುತ್ತೇವೆ.

4.00 P.M.

ಉದಾಹರಣೆಗೆ ನಮ್ಮ ಹಿರಿಯ ಸದಸ್ಯರಿಗೆಲ್ಲಾ ಗೊತ್ತಿದೆ, ಈ ಬಿಸಿ ಊಟದ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ, ಹಂಗಾಮಿಯಾಗಿ ನೌಕರರನ್ನು ತೆಗೆದುಕೊಂಡಿದ್ದೇವೆ, ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರು ಸಾವಿರಾರು ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅನೇಕ ಜನ ಹತ್ತಾರು ವರ್ಷಗಳಿಂದ ದಿನಗೂಲಿನಲ್ಲಿ ಕೆಲಸ ಮಾಡುವವರಿಗೆ ನಾವು ಕನ್ಸಾಲಿಡೇಟ್ ರೂ. 2000–3000 ವರೆಗೆ ಕೊಡುತ್ತಿದ್ದೇವೆ, ಅದರಲ್ಲಿ ಎರಡು ಹೊತ್ತು ಊಟ ಮಾಡುವುದಕ್ಕಾಗುವುದಿಲ್ಲವೆನ್ನುವ ಅರಿವು ನನಗಿದೆ, ಅಲ್ಲಿ ಕುಳಿತಾಗ ನಾನೇನು ಮಾತನಾಡಿದ್ದೇನೆ, ಎನ್ನುವ ಅರಿವು ಇಲ್ಲಿ ಕುಳಿತು ಮಾತನಾಡುವಾಗಲೂ ಇದೆ. ಆದರೆ ಇವತ್ತು ಹಣಕಾಸಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಸುಪ್ರೀಂಕೋರ್ಟ್ ಆದೇಶ ಹಿನ್ನೆಲೆಯಲ್ಲಿ ಇವರಿಗೆ ತೊಂದರೆಯಾಗದ ರೀತಿಯಲ್ಲಿ ಯಾವ ಕ್ರಮವನ್ನು ನಾವು ತೆಗೆದುಕೊಳ್ಳಬೇಕೆಂಬ ಬಗ್ಗೆ ಚಿಂತನೆ ಮಾಡುತ್ತೇವೆ ಮತ್ತೆ ನಮ್ಮ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು, ಈ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆಯ ಬಗ್ಗೆ ಕ್ರಮ ತೆಗೆದುಕೊಂಡು ದಿನಗೂಲಿ ನೌಕರರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ, ಆ ಹಿನ್ನೆಲೆಯಲ್ಲಿ ತಮ್ಮ ಬೇಡಿಕೆಯನ್ನು ಈಡೇರಿಸಬೇಕೆಂದು ಬೆಂಗಳೂರಿನಲ್ಲಿ ಸತ್ಯಾಗ್ರಹ ಮಾಡಬೇಕೆಂದು ಬಂದಿದ್ದಾರೆ, ಅವರು ವಾಪಸ್ ಹೋಗಿ ಅವರ ಕೆಲಸಕಾರ್ಯಗಳನ್ನು ನಿರ್ವಹಿಸಲಿ. ಈ ಬಗ್ಗೆ ಸಹಾನುಭೂತಿಯಿಂದ ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವ ಭರವಸೆಯನ್ನು ನಾನು ಈ ಮನೆಯ ಮೂಲಕ ಅಲ್ಲಿ ಸತ್ಯಾಗ್ರಹ ಮಾಡುತ್ತಿರುವಂತಹ ಹಾಗೂ ಸಾವಿರಾರು ಸಂಖ್ಯೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿರುವ ನೌಕರರಿಗೆ ಕೊಡಲು ನಾನು ಇಷ್ಟಪಡುತ್ತೇನೆ.

(ಇ) **ವಿಷಯ** : ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತುಳು ಸರ್ಟಿಫಿಕೇಟ್ ನೀಡುವ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಈಗ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳು ನಾಡೆಂದೇ ಕರೆಯುತ್ತಾರೆ. ಆದರೆ ಹಿಂದೆ ಯಾರಿಗೂ